ಸಮಗ್ರ ಶಿಕ್ಷಣ – ಕರ್ನಾಟಕ
ರಾಜ್ಯಯೋಜನಾ ನಿರ್ದೇಶಕರಕಛೇರಿ, ಹೊಸ ಸಾರ್ವಜನಿಕ
ಕಟ್ಟಡಗಳ ಪೂರಕಕಟ್ಟಡ, ನೃಪತುಂಗರಸ್ತೆ, ಬೆಂಗಳೂರು–560001.

ಸಂಖ್ಯೆ:ಸಶಿಕ/TRG/ಕ್ಲ.ಸ.ಸಭೆ/ 2023-24/2024-25 ದಿನಾಂಕ:14/06/2024

# ಸುತ್ತೋಲೆ

**ವಿಷಯ:-** 2024-25ನೇ ಸಾಲಿನಲ್ಲಿ ಕ್ಲಸ್ಟರ್ ಹಂತದಲ್ಲಿ ವಿಷಯವಾರು ಸಮಾಲೋಚನಾ ಸಭೆಗಳನ್ನು ಹಾಗೂ ತಾಲ್ಲೂಕು ಜಿಲ್ಲಾ ಹಂತಗಳಲ್ಲಿ ಅನುಷ್ಠಾನಾಧಿಕಾರಿಗಳಿಗೆ ಪ್ರಗತಿ ಪರಿಶೀಲನಾ ಸಭೆಗಳನ್ನು ಆಯೋಜಿಸುವ ಕುರಿತು.

**ಉಲ್ಲೇಖ:-** 1.ಈ ಕಛೇರಿ ಸುತ್ತೋಲೆ ಸಂಖ್ಯೆ: ಸಶಿಕ/TRG/ಕ್ಲ.ಸ.ಸಭೆ/ 2023-24, ದಿನಾಂಕ:12-09-2023

********

2022-23 ನೇ ಸಾಲಿನಲ್ಲಿ ಕಲಿಕಾ ಚೇತರಿಕೆಗೆ ಸಂಬಂಧಿಸಿದಂತೆ ಕಲಿಕಾಫಲ ಆಧಾರಿತ, ಚಟುವಟಿಕೆ ಆಧಾರಿತ ಹಾಗೂ ನಾವಿನ್ಯಯುತ ಬೋಧನೆಗೆ ಪ್ರೋತ್ಸಾಹ ನೀಡಲು, ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಅನುಷ್ಠಾನ ಮಾಡುತ್ತಿರುವ ಸಂದರ್ಭದಲ್ಲಿ ಕಂಡುಬರುವ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಕಲಿಕಾ ಚೇತರಿಕೆ ಕಾರ್ಯಕ್ರಮ ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಅಕ್ಟೋಬರ್ 2022 ರಿಂದ ಫೆಬ್ರುವರಿ 2023 ರವರೆಗೆ ಒಟ್ಟು 05 ಕ್ಲಸ್ಟರ್ ಸಭೆಯನ್ನು ನಡೆಸಲಾಯಿತು. ಅದಕ್ಕೂ ಹಿಂದಿನ ವರ್ಷಗಳಲ್ಲಿ ಸಹ ಸಿ.ಆರ್.ಪಿ. ಗಳ ನೇತೃತ್ವದಲ್ಲಿ ಎಲ್ಲಾ ಶಿಕ್ಷಕರನ್ನು ಒಳಗೊಂಡಂತೆ ಕ್ಲಸ್ಟರ್ ಸಭೆಗಳನ್ನು ನಡೆಸಲಾಗುತ್ತಿತ್ತು.

ಸಮಾಲೋಚನಾ ಸಭೆಗಳಲ್ಲಿ ಶಿಕ್ಷಕರು ಆಯಾ ವಿಷಯದಲ್ಲಿ ತಮ್ಮ ವಿಷಯ ಬೋಧನೆಯ ಕ್ಲಿಷ್ಟಾಂಶಗಳನ್ನು ಗುರುತಿಸಿಕೊಂಡು ಸಂದೇಹಗಳನ್ನು ಪರಿಹರಿಸಿಕೊಳ್ಳುವುದರ ಜೊತೆಗೆ ಕಲಿಕಾ ಫಲಗಳ ಕುರಿತು ಸ್ಪಷ್ಟನೆ, ಆ ಕಲಿಕಾ ಫಲಗಳನ್ನು ಪಡೆಯಲು ಬಳಸುವ ಕಾರ್ಯತಂತ್ರ, ಅನುಭವಾತ್ಮಕ ಕಲಿಕೆಗೆ ಬೇಕಾದ ಸಂಪನ್ಮೂಲ, ಕೌಶಲ ಇತ್ಯಾದಿಗಳನ್ನು ಪಡೆದು ಕೊಳ್ಳಲು ಸೂಚಿಸಲಾಗಿತ್ತು.

ಅದರಂತೆ, 2023-24 ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಕಲಿಕಾ ಫಲ ಆಧಾರಿತ, ಚಟುವಟಿಕೆ ಆಧಾರಿತ, ಅನ್ವಯಿಕ, ವೈಚಾರಿಕ, ವಿಮರ್ಶಾತ್ಮಕವಾಗಿ ಯೋಚಿಸುವಂತೆ ಕಲಿಕೆಯಾಗಬೇಕಾಗಿರುವುದರಿಂದ ಹಾಗೂ ಶಿಕ್ಷಕರಿಗೆ ನಿರಂತರ ಶೈಕ್ಷಣಿಕ ಅಭಿವೃದ್ಧಿಗೆ ವೇದಿಕೆ ಕಲ್ಪಿಸಿಕೊಡಬೇಕಾಗಿರುವುದರಿಂದ ಕ್ಲಸ್ಟರ್ ಮಟ್ಟದಲ್ಲಿ ನಲಿಕಲಿ ಶಿಕ್ಷಕರು, ಭಾಷಾ ಶಿಕ್ಷಕರು ಮತ್ತು ಕೋರ್ ವಿಷಯ ಶಿಕ್ಷಕರುಗಳಿಗೆ ಪ್ರತ್ಯೇಕವಾಗಿ ಸಮಾಲೋಚನಾ ಸಭೆಗಳನ್ನು ನಡೆಸಲಾಗಿದೆ. ಸದರಿ ಕಾರ್ಯಕ್ರಮವನ್ನು 2024-25ನೇ ಸಾಲಿನಲ್ಲಿಯೂ ಈ ಕೆಳಕಂಡ ಅಂಶಗಳಿಗನುಗುಣವಾಗಿ ಮುಂದುವರೆಸಬೇಕೆಂದು ಸೂಚಿಸಿದೆ.

## <u>ಕ್ಲಸ್ಟರ್ ಮಟ್ಟದ ಸಮಾಲೋಚನಾ ಸಭೆಯು ಒಳಗೊಂಡಿರುವ ಮುಖ್ಯಾಂಶಗಳು.</u>

1. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕ್ಲಸ್ಟರ್ ಮಟ್ಟದಲ್ಲಿ ಸಮಾಲೋಚನಾ ಸಭೆ.
2. ನಲಿಕಲಿ ಶಿಕ್ಷಕರು, 04 ರಿಂದ 08 ನೇ ತರಗತಿಗೆ ಬೋಧಿಸುವ ಭಾಷಾ ಶಿಕ್ಷಕರು ಮತ್ತು ಕೋರ್ ವಿಷಯ ಶಿಕ್ಷಕರುಗಳಿಗೆ ಪ್ರತ್ಯೇಕ ಸಮಾಲೋಚನಾ ಸಭೆ.
3. ಜುಲೈ 2024 ರಿಂದ ಜನವರಿ 2025 ರವರೆಗೆ ಒಟ್ಟು 06 ಸಮಾಲೋಚನಾ ಸಭೆ.
4. ವಿಷಯವಾರು ಸಂಪನ್ಮೂಲ ಶಿಕ್ಷಕರನ್ನು ಮಾರ್ಗದರ್ಶಕರಾಗಿ ನೇಮಿಸಿಕೊಂಡು ಸಮಾಲೋಚನಾ ಸಭೆ.

5. ಮಾರ್ಗದರ್ಶಕರಿಗೆ ಸಮಾಲೋಚನ ಸಭೆಯಲ್ಲಿ ಚರ್ಚಿಸ ಬೇಕಾದ ವಿಷಯಗಳ ಬಗ್ಗೆ ಪೂರ್ವಭಾವಿಯಾಗಿ ಪ್ರತಿ ಬುಧವಾರ ಅಥವಾ ಗುರುವಾರ ತರಬೇತಿ ನೀಡಿ ಸಿದ್ಧಗೊಳಿಸುವ ಬಗ್ಗೆ ಉಪನಿರ್ದೇಶಕರು (ಅಭಿವೃದ್ಧಿ) ರವರು ಕ್ರಮವಹಿಸುವುದು.

6. ಶಿಕ್ಷಕರಿಗೆ ಪ್ರತಿ ಶನಿವಾರ ಯಾವ ಕ್ಲಿಷ್ಟಾಂಶಗಳ ಬಗ್ಗೆ ಸಮಾಲೋಚನಾ ಸಭೆಯಲ್ಲಿ ಚರ್ಚಿಸಲಾಗುವುದು ಎಂಬುದನ್ನು ಮೊದಲೇ ತಿಳಿಸುವುದು.

7. ಶಿಕ್ಷಕರು ಸಮಾಲೋಚನಾ ಸಭೆಯಲ್ಲಿ ಚರ್ಚಿತವಾಗುವ ವಿಷಯದಲ್ಲಿ ತಮಗಿರುವ ಕ್ಲಿಷ್ಟಾಂಶಗಳನ್ನು ಗುರುತಿಸಿಕೊಂಡು ಬಂದು ಸಂದೇಹ ಪರಿಹರಿಸಿಕೊಳ್ಳುವುದು.

8. ಕ್ಲಸ್ಟರ್ ಹಂತದ ಸಮಾಲೋಚನಾ ಸಭೆಯ ವೇಳಾಪಟ್ಟಿ ಈ ಕೆಳಕಂಡಂತಿದೆ.

**ಮೊದಲನೇ ಸಭೆ**

| ಕ್ರ.ಸಂ | ಶಿಕ್ಷಕರ ವಿಧ | ಸಭೆಯ ದಿನಾಂಕ |
|---|---|---|
| 1 | ನಲಿಕಲಿ ಶಿಕ್ಷಕರು | 13/07/2024 |
| 2 | ಭಾಷಾ ಶಿಕ್ಷಕರು | 20/07/2024 |
| 3 | ಕೋರ್ ವಿಷಯ ಶಿಕ್ಷಕರು | 27/07/2024 |

**ಎರಡನೇ ಸಭೆ**

| ಕ್ರ.ಸಂ | ಶಿಕ್ಷಕರ ವಿಧ | ಸಭೆಯ ದಿನಾಂಕ |
|---|---|---|
| 1 | ನಲಿಕಲಿ ಶಿಕ್ಷಕರು | 10/08/2024 |
| 2 | ಭಾಷಾ ಶಿಕ್ಷಕರು | 07/08/2024 |
| 3 | ಕೋರ್ ವಿಷಯ ಶಿಕ್ಷಕರು | 24/08/2024 |

**ಮೂರನೇ ಸಭೆ**

| ಕ್ರ.ಸಂ | ಶಿಕ್ಷಕರ ವಿಧ | ಸಭೆಯ ದಿನಾಂಕ |
|---|---|---|
| 1 | ನಲಿಕಲಿ ಶಿಕ್ಷಕರು | 19/10/2024 |
| 2 | ಭಾಷಾ ಶಿಕ್ಷಕರು | 26/10/2024 |
| 3 | ಕೋರ್ ವಿಷಯ ಶಿಕ್ಷಕರು | 02/11/2024 |

**ನಾಲ್ಕನೇ ಸಭೆ**

| ಕ್ರ.ಸಂ | ಶಿಕ್ಷಕರ ವಿಧ | ಸಭೆಯ ದಿನಾಂಕ |
|---|---|---|
| 1 | ನಲಿಕಲಿ ಶಿಕ್ಷಕರು | 16/11/2024 |
| 2 | ಭಾಷಾ ಶಿಕ್ಷಕರು | 23/11/2024 |
| 3 | ಕೋರ್ ವಿಷಯ ಶಿಕ್ಷಕರು | 30/11/2024 |

**ಐದನೇ ಸಭೆ**

| ಕ್ರ.ಸಂ | ಶಿಕ್ಷಕರ ವಿಧ | ಸಭೆಯ ದಿನಾಂಕ |
|---|---|---|
| 1 | ನಲಿಕಲಿ ಶಿಕ್ಷಕರು | 14/12/2024 |
| 2 | ಭಾಷಾ ಶಿಕ್ಷಕರು | 21/12/2024 |
| 3 | ಕೋರ್ ವಿಷಯ ಶಿಕ್ಷಕರು | 28/12/2024 |

ಆರನೇ ಸಭೆ

| ಕ್ರ.ಸಂ | ಶಿಕ್ಷಕರ ವಿಧ | ಸಭೆಯ ದಿನಾಂಕ |
|---|---|---|
| 1 | ನಲಿಕಲಿ ಶಿಕ್ಷಕರು | 11/01/2025 |
| 2 | ಭಾಷಾ ಶಿಕ್ಷಕರು | 18/01/2025 |
| 3 | ಕೋರ್ ವಿಷಯ ಶಿಕ್ಷಕರು | 25/01/2025 |

9. ಸರ್ಕಾರಿ ಪ್ರೌಢ ಶಾಲೆಗಳಿಗೆ ಹಿಂದಿನ ವರ್ಷಗಳಂತೆ ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ನೇತೃತ್ವದಲ್ಲಿ ವಿಷಯವಾರು ಮಾಸಿಕ ಒಂದರಂತೆ 2024ರ ಜುಲೈ, ಆಗಸ್ಟ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಮತ್ತು 2025ರ ಜನವರಿ ಈ ತಿಂಗಳುಗಳಲ್ಲಿ ವಿಷಯವಾರು 06 ಸಮಾಲೋಚನಾ ಸಭೆಗಳನ್ನು ನಡೆಸುವುದು.

10. ಜಿಲ್ಲೆಯ ಎಲ್ಲಾ ತಾಲ್ಲೂಕಿನ ಎಲ್ಲಾ ಕ್ಲಸ್ಟರ್ ಗಳಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಿಕ್ಷಕರುಗಳಿಗೆ ಸಮಾಲೋಚನಾ ಸಭೆ ವ್ಯವಸ್ಥಿತವಾಗಿ ನಡೆಯುತ್ತಿರುವುದರ ಬಗ್ಗೆ ಮಾಸಿಕ ವರದಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಉಪನಿರ್ದೇಶಕರು (ಅಭಿವೃದ್ಧಿ)ರವರು ರಾಜ್ಯ ಕಛೇರಿಗೆ ನೀಡುವುದು.

## ಬ್ಲಾಕ್ ಹಾಗೂ ಜಿಲ್ಲಾ ಹಂತಗಳಲ್ಲಿ ಅನುಷ್ಠಾನಾಧಿಕಾರಿಗಳಿಗೆ ಪ್ರಗತಿ ಪರಿಶೀಲನಾ ಸಭೆ

1) ಶೈಕ್ಷಣಿಕ ಪ್ರಗತಿ, ಗುಣಮಟ್ಟದ ಶಿಕ್ಷಣ ಹಾಗೂ ಇಲಾಖೆ ಸೂಚಿಸಿದ ಎಲ್ಲಾ ಕಾರ್ಯಕ್ರಮಗಳು ಶಾಲಾ ಹಂತದಲ್ಲಿ ಪರಿಪೂರ್ಣವಾಗಿ ಅನುಷ್ಠಾನಗೊಳ್ಳಲು ವಿವಿಧ ಹಂತಗಳಲ್ಲಿ ಪ್ರಗತಿ ಪರಿಶೀಲನಾ ಸಭೆಗಳನ್ನು ಪ್ರತಿ ಮಾಹೆಯೂ ಆಯೋಜಿಸುವುದು.
2) ಹಿಂದಿನ ಮಾಹೆಯಲ್ಲಿ ಸಂಪೂರ್ಣಗೊಳಿಸಿದ ಕಾರ್ಯ, ಸಮಾಲೋಚನಾ ಸಭೆ ಹಾಗೂ ಶೈಕ್ಷಣಿಕ ಪ್ರಗತಿ ಬಗ್ಗೆ ಹಾಗೂ ಮುಂದಿನ ಮಾಹೆಯಲ್ಲಿ ಪೂರ್ಣಗೊಳಿಸಬೇಕಾದ ಕಾರ್ಯ, ಸಮಾಲೋಚನಾ ಸಭೆ ಹಾಗೂ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವುದು.
3) ವಿವಿಧ ಹಂತಗಳಲ್ಲಿ ಪ್ರತಿ ತಿಂಗಳು ಈ ಕೆಳಗಿನಂತೆ ಪ್ರಗತಿ ಪರಿಶೀಲನಾ ಸಭೆ ಆಯೋಜಿಸುವುದು.

| ಕ್ರ. ಸಂ | ಹಂತ | ಭಾಗವಹಿಸಬೇಕಾದ ಅನುಷ್ಠಾನಾಧಿಕಾರಿಗಳು | ಕಾಲಾವಧಿ |
|---|---|---|---|
| 1 | ಶಾಲಾ ಹಂತ | ಮುಖ್ಯ ಶಿಕ್ಷಕರು ಹಾಗೂ ಸಹಶಿಕ್ಷಕರು | ತಿಂಗಳ 2 ನೇ ಕೆಲಸದ ದಿನ |
| 2 | ಕ್ಲಸ್ಟರ್ ಹಂತ | ಸಿ.ಆರ್.ಪಿ ಹಾಗೂ ಮುಖ್ಯ ಶಿಕ್ಷಕರು | ತಿಂಗಳ 4 ನೇ ಕೆಲಸದ ದಿನ- ಅಪರಾಹ್ನ ½ ದಿನ |
| 3 | ಬ್ಲಾಕ್ ಹಂತ | ಡಯಟ್ ನೋಡಲ್ ಅಧಿಕಾರಿ, ಬಿ.ಇ.ಓ, ಬಿಆರ್.ಸಿ, ಸಿ.ಆರ್.ಪಿ | ತಿಂಗಳ 6 ನೇ ಕೆಲಸದ ದಿನ- ಪೂರ್ಣ 1 ದಿನ |
| 4 | ಜಿಲ್ಲಾ ಹಂತ | ಡಿಡಿಪಿಐ (ಆಡಳಿತ ಹಾಗೂ ಅಭಿವೃದ್ಧಿ) ಜಿಲ್ಲೆಯ ಉಪನಿರ್ದೇಶಕರ ಕಛೇರಿ, ಡಯಟ್‌ನ ಎಲ್ಲಾ ಅಧಿಕಾರಿಗಳು ಎಲ್ಲಾ ಬಿ.ಇ.ಓ , ಬಿ .ಆರ್ .ಸಿ ಗಳು. | ತಿಂಗಳ 8 ನೇ ಕೆಲಸದ ದಿನ- ಪೂರ್ಣ 1 ದಿನ |

ಎಲ್ಲಾ ಹಂತಗಳ ಪ್ರಗತಿ ಪರಿಶೀಲನಾ ಸಭೆಗಳಲ್ಲೂ ಅಜೆಂಡಾವಾರು ಚರ್ಚೆ ಹಾಗೂ ಪ್ರಗತಿ ಪರಿಶೀಲನೆಯನ್ನು ಮಾಡುವುದು ಕಡ್ಡಾಯ. ಪ್ರತಿ ಹಂತದಲ್ಲೂ ಅನುಷ್ಠಾನಾಧಿಕಾರಿಗಳಾದ ಮುಖ್ಯಸ್ಥರು ವ್ಯವಸ್ಥಿತವಾಗಿ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ ಇಲಾಖೆಯ ಶೈಕ್ಷಣಿಕ, ಸಾಂಸ್ಕೃತಿಕ, ಆಡಳಿತಾತ್ಮಕ, ಎಲ್ಲಾ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ಅನುಷ್ಠಾನಗೊಳ್ಳುವಂತೆ ಕ್ರಮ ಕೈಗೊಳ್ಳುವುದು.

ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು.

**ಇವರಿಗೆ:**

1. ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ರವರಿಗೆ ಮುಂದಿನ ಸೂಕ್ತ ಅಗತ್ಯ ಕ್ರಮಕ್ಕೆ.
2. ರಾಜ್ಯದ ಎಲ್ಲಾ ಬಿ.ಇ.ಒ ಮತ್ತು ಬಿ.ಆರ್.ಸಿ ರವರಿಗೆ ಉಪನಿರ್ದೇಶಕರು (ಆಡಳಿತ) ಇವರ ಮುಖೇನ ಮುಂದಿನ ಸೂಕ್ತ ಅಗತ್ಯ ಕ್ರಮಕ್ಕೆ.

**ಪ್ರತಿಯನ್ನು ಮಾಹಿತಿಗಾಗಿ:**

1. ಆಯುಕ್ತರು ಮತ್ತು ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ , ಬೆಂಗಳೂರು, ಕಲಬುರ್ಗಿ ಮತ್ತು ಧಾರವಾಡ ರವರಿಗೆ,
2. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ , ಕಲಬುರ್ಗಿ ಮತ್ತು ಧಾರವಾಡ ರವರಿಗೆ,
3. ಕಛೇರಿ ಪ್ರತಿ .